# ತುಂಗೆ ಮಂಗಳ ತರಂಗೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 271.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 251.
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 42.
4. **Note:** Lyrics given without highlights are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are given in green highlights separately.
5. **Note:** Singer has followed lyrics as in Ref. 1.

ರಾಗ: ಭೂಪಾಳಿ ತಾಳ: ಝಂಪೆ

ತುಂಗೆ ಮಂಗಳ ತರಂಗೆ || ಪ ||
ಹರಿ ಸರ್ವಾಂಗೆ ಜಯ ಜಯತು ಜಯ ಜಯ ತುಂಗಭದ್ರೆ || ಅಪ ||

ಆದಿಯೊಲೊಬ್ಬ ದೈತ್ಯ ಮೇದಿನಿಯ ಕದ್ದೊಯ್ದು
ಸಾಧಿಸುತ್ತಿರಲವನ ಬೆನ್ನಟ್ಟಿ ಬಿಡದೆ
ಛೇದಿಸುತಲವನ ಭೂಮಿಯನೆತ್ತಿ ಕಾಯ್ದಂಥ
ಆದಿ ವರಾಹನ ದಾಡೆಗಳಿಂದ ಬಂದೆ || 1 ||

ಜಲವೆಲ್ಲ ಹರಿಮಯ ಶಿಲೆಯೆಲ್ಲ ಶಿವಮಯ
ಮಳಲು ಮಿಟ್ಟೆಗಳೆಲ್ಲ ಮಣಿಯ ಮಯವು
ಬೆಳದಿಪ್ಪ ದರ್ಭೆಗಳು ಸಾಕ್ಷಾತ್ತು ಬ್ರಹ್ಮಮಯ
ನಳಿನ ನಾಳವು ಸರ್ವ ವಿಷ್ಣುಮಯವು || 2 ||

ಇದೇ ವೃಂದಾವನ ಇದೇ ಕ್ಷೀರಾಂಬುಧಿ
ಇದೇ ವೈಕುಂಠಕೆ ಸರಿಯೆಂದೆನಿಸಿದೆ
ಇದೇ ಬದರಿಕಾಶ್ರಮ ಇದೇ ವಾರಣಾಸಿಗೆ

ಅಧಿಕ ಫಲವನ್ನೀವ ದೇವಿ || 3 ||

ಧರೆಗೆ ದಕ್ಷಿಣ ವಾರಣಾಸಿಯೆಂದೆನಿಸಿದೆ
ಪರಮ ಪವಿತ್ರೆ ಪಾವನ ಚರಿತೆ ನಿನ್ನ
ಸ್ಮರಣೆ ಮಾತ್ರದಿ ಕೋಟಿ ಜನ್ಮದಘವನು ಕಳೆವ
ಪರಿದು ಸಾಯುಜ್ಯ ಫಲವೀವ ದೇವಿ || 4 ||

ಪರಮ ಭಕ್ತ ಪ್ರಹ್ಲಾದಗೊಲಿದು ಬಂದು
ನರಸಿಂಹ ಕ್ಷೇತ್ರವೆಂದೆನಿಸಿ ಮೆರೆದೆ
ಧರೆಯೊಳಧಿಕ ವರ ಕೂಡಲೀಪುರದಲ್ಲಿ
ವರದ ಪುರಂದರ ವಿಠ್ಠಲನಿರಲು ಬಂದೆ || 5 ||

**Note:** Below mentioned lyrics in green highlights are as per Ref. 3 above.

ರಾಗ: ಭೂಪಾಳಿ ತಾಳ: ಝಂಪೆ

ತುಂಗೆ ಮಂಗಳ ತರಂಗೆ, ಹರಿಯ ಸರ್ವಾಂಗೆ
ಜಯ ಜಯ ಜಯತು ತುಂಗೆ || ಪ ||

ಆದಿಯೊಲ್ಲೊಬ್ಬ ದೈತ್ಯ ಮೇದಿನಿಯ ಕದ್ದೊಯ್ದು
ಸಾಧಿಸಿ ರಸಾತಳದಲ್ಲಿರಿಸೆ
ಭೇದಿಸಿದವನ ನಾಸಿಕದಲ್ಲಿ ಪುಟ್ಟಿದೆ
ಆದಿ ವರಾಹನ ದಾಡೆಯಲಿ ಬಂದೆ ದೇವಿ || ೧ ||

ಜಲವೆಲ್ಲ ಹರಿಮಯ ಶಿಲೆಯೆಲ್ಲ ಶಿವಮಯ
ಮಳಲು ಮಿಟ್ಟೆಗಳೆಲ್ಲ ಮುನಿಮಯವು
ಬೆಳದ ದರ್ಭೆಗಳು ಸಾಕ್ಷಾತು ಬ್ರಹ್ಮಮಯ
ನಳಿನ ನಾಳವು ಸರ್ವ ವಿಷ್ಣುಮಯವು || ೨ ||

ಇದೇ ವೃಂದಾವನ ಇದೇ ಕ್ಷೀರಾಂಬುಧಿ
ಇದೇ ವೈಕುಂಠಕೆ ಸರಿಮಿಗಿಲೆನಿಸಿದೆ
ಇದೇ ಬದರಿಕಾಶ್ರಮ ಇದೇ ವಾರಣಾಸಿಗೆ

ಅಧಿಕವೆಂದೆನಿಸಿದೆ ದೇವಿ ತುಂಗೆ     || ೩ ||

ಧರೆಗೆ ದಕ್ಷಿಣ ವಾರಣಾಸಿಯೆಂದೆನಿಸಿದೆ
ಪರಮ ಪವಿತ್ರ ಪಾವನ ಚರಿತ್ರೆಯು ನಿನ್ನ
ಸ್ಮರಣೆ ಮಾತ್ರದಿ ಕೋಟಿ ಜನ್ಮದಘವನಳಿವ
ಪರಮ ಸಾಯುಜ್ಯದ ಫಲವೀವ ದೇವಿ     || ೪ ||

ಪರಮ ಭಕ್ತ ಪ್ರಹ್ಲಾದಗೊಲಿದು ಬಂದ
ಪರಮ ನರಸಿಂಹ ಕ್ಷೇತ್ರವೆಂದೆನಿಸಿ ಮೆರೆದೆ
ಧರೆಯೊಳಧಿಕವಾದ ಕೂಡಲೀಪುರದಲಿ
ವರದ ಪುರಂದರ ವಿಠ್ಠಲನಿರಲು ಬಂದೆ     || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಹರಿಯಸರ್ವಾಂಗೆ** = ತನ್ನ ಸರ್ವಾಂಗದಲ್ಲಿಯೂ ಹರಿಮಯಳಾದವಳು

**ಒಬ್ಬ ದೈತ್ಯ** = ಹಿರಣ್ಯಾಕ್ಷ.  ಇವನು ಹಿರಣ್ಯ ಕಶಿಪುವಿನ ಅಣ್ಣ.  ಇವನು ಬ್ರಹ್ಮನಿಂದ ವರ ಪಡೆದು ಮೂರೂ ಲೋಕಗಳನ್ನು ಪೀಡಿಸತೊಡಗಿದನು.  ಶ್ರೀಹರಿಗೂ ಇವನಿಗೂ ನಡೆದ ಯುದ್ಧದಲ್ಲಿ ಸೋಲುವ ಲಕ್ಷಣಗಳು ಕಂಡಾಗ, ಭೂಮಿಯನ್ನು ಸುತ್ತಿಕೊಂಡು ಸಮುದ್ರದಲ್ಲಿ ಮುಣುಗಿದ.  ವಿಷ್ಣು ವರಾಹ ಅವತಾರ ತಾಳಿ ಹಿರಣ್ಯಾಕ್ಷನನ್ನು ಕೊಂಡು ಭೂಮಿಯನ್ನು ಮೇಲಕ್ಕೆತ್ತಿದನು.

**ಮೇದಿನಿ** = ಭೂಮಿ

**ರಸಾತಳ** = ಅಧೋಲೋಕಗಳಲ್ಲಿ ಒಂದು.  ನಾಲ್ಕನೆಯದು (ಅತಳ, ವಿತಳ, ಸುತಳ, ರಸಾತಳ, ತಳಾತಳ, ಮಹಾತಳ, ಪಾತಾಳ.  ಇವು ಏಳು ಅಧೋಲೋಕಗಳು)

**ಭೇದಿಸಿದವನ ನಾಸಿಕ** = ವರಾಹ ದೇವನ ಮೂಗು (ವರಾಹ ದೇವನ ಮೂಗಿನಲ್ಲಿ ಹುಟ್ಟಿ ತುಂಗಾನದಿಯು ಅವನ ಕೋರೆಯಿಂದ ಹರಿದು ಸಾಗಿತು)

**ಮಳಲು ಮಿಟ್ಟೆ** = ಉಸುಕಿನ ದಿನ್ನೆ

**ನಾಳ** = ದೇಟು

**ಕ್ಷೀರ ಸಾಗರ** = ಸಪ್ತ ಸಮುದ್ರಗಳಲ್ಲಿ ಒಂದು

**ಬದರಿಕಾಶ್ರಮ** = ಇಲ್ಲಿ ವ್ಯಾಸರ ಆಶ್ರಮವಿದೆ.  ಇದು ಅಲಕಾನಂದ ನದಿ ತೀರದಲ್ಲಿದೆ.

**ವಿ.ಸೂ.: -** ಪುರಂದರ ದಾಸರು ತುಂಗಾ ಭದ್ರಾ ನದಿಗಳ ಸಂಗಮದಲ್ಲಿ ಇರುವ ಕೂಡಲಿ ಕ್ಷೇತ್ರಕ್ಕೆ ಹೋದಾಗ ರಚಿಸಿದ ಕೀರ್ತನೆ. ಇದಕ್ಕೆ ನರಸಿಂಹ ಕ್ಷೇತ್ರವೆಂಬ ಹೆಸರಿದೆ.

**Classification:** Keerthane
**Ankita:** varada purandara vittala
**Location:** Kudali Pura, Shivamogga Dist, Karnataka.
**Category:** Mahtmya Jnana,
**Sub-Category:** Krishna, Lakshmi, jaya, nadi, Tungabhadra, daitya, asura, bhumi, varahaavatara, niru, shiva, brahma, Vishnu, vrudavana, halu, Samudra, vaikunta, kashi, phala, smarane, janma, devi, prahallada, Narasimha, kUDali,
**Pravachana:** NA
**Explanation:** NA